ಪ್ರಶ್ನೆ ಸಂಖ್ಯೆ : (190) 39 ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.

ಅ) ಯಳಂದೂರು ತಾಲ್ಲೂಕಿನ ಮದ್ದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದಲ್ಲಿ ಪೊಲೀಸ್ ಡಿನ್‌ಪೋಸ್ಟ್ ತೆರೆಯಲು ಮನವಿ ಸಲ್ಲಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಮನವಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) ಯಳಂದೂರು ತಾಲ್ಲೂಕಿನ ಮದ್ದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗ್ರಾಮದಲ್ಲಿ ಪೊಲೀಸ್ ಔಸ್ಪಪೋಸ್ಟ್ ತೆರೆಯಲು ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ : (207) 41 ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ)

ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪುರಸಭೆ ವಾರ್ಡ್‌ಗಳ ಮೀಸಲಾತಿಯನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗಿದೆ;

ಆ) ಈ ಮೀಸಲಾತಿಯನ್ನು ನಿಗದೀಕರಿಸುವಾಗ ಹಿಂದಿನ ಎಷ್ಟು ಬಡಾವಣೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ;

ಇ) ಪುರಸಭೆ ಮೀಸಲಾತಿಯನ್ನು ರೊಟೇಷನ್ ಆಧಾರದ ಮೇಲೆ ನಿರ್ಧರಿಸಲಾಗಿದೆಯೇ?

ಈ) ಅರಸೀಕೆರೆ ಪುರಸಭೆಯ 1996, 2001ರಲ್ಲಿ 23 ವಾರ್ಡ್ ಮೀಸಲಾತಿ ವಿವರ ಒದಗಿಸುವುದು.

ಉ) ಈ ಪುರಸಭೆಯ ನೈರ್ಮಲ್ಯ ಕಾರ್ಯದ ಗುತ್ತಿಗೆದಾರರು ಯಾರು;

ಊ) ಇವರುಗಳ ಗುತ್ತಿಗೆ ಅವಧಿ ಎಷ್ಟು (ವಿವರ ಒದಗಿಸುವುದು)?

ಶ್ರೀ ಆಲಂಗೂರು ಶ್ರೀನಿವಾಸ್

ಅ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 11 ಉಪ ಕಲಂ 4,5,6ಮತ್ತು 2001ರ ಜನಗಣತಿ ಅನ್ವಯ ನಗರಾಭಿವೃದ್ಧಿ ಇಲಾಖೆಯ ಮಾರ್ಗಸೂಚಿ ಆದೇಶ ಸಂಖ್ಯೆ. ನಅಇ 82 ಎಂಎಲ್ಆರ್ 2007 ದಿ. 07-05-2007 ಮತ್ತು 14-05-2007ರನ್ವಯ ಅರಸೀಕೆರೆ ಪುರಸಭೆಗೆ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಿ ಸರ್ಕಾರವು ಕರಡು ಅದಿಸೂಚನೆಯನ್ನು 18-06-2007 ರಲ್ಲಿ ಹೊರಡಿಸಲಾಗಿದೆ.

ಆ) ಮೀಸಲಾತಿಯನ್ನು ನಿಗಧಿಪಡಿಸುವಾಗ ಹಿಂದಿನ 23 ವಾರ್ಡ್‌ಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಇ) ಹೌದು

ವಾರ್ಡ್‌ನಂ.	1995ರ ಮೀಸಲಾತಿ	2001ರ ಮೀಸಲಾತಿ
1.	ಸಾಮಾನ್ಯ	ಹಿಂದುಳಿದವರ್ಗ(ಎ) (ಮಹಿಳೆ)
2.	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ (ಬಿ)
3.	ಹಿಂದುಳಿದ ವರ್ಗ (ಎ)	ಪರಿಶಿಷ್ಟ ಜಾತಿ (ಮಹಿಳೆ)
4.	ಪರಿಶಿಷ್ಟ ಜಾತಿ	ಹಿಂದುಳಿದವರ್ಗ(ಎ) (ಮಹಿಳೆ)
5.	ಹಿಂದುಳಿದ ವರ್ಗ (ಎ)	ಪರಿಶಿಷ್ಟ ಜಾತಿ (ಮಹಿಳೆ)
6.	ಹಿಂದುಳಿದವರ್ಗ(ಎ)(ಮಹಿಳೆ)	ಪರಿಶಿಷ್ಟ ಜಾತಿ
7.	ಸಾಮಾನ್ಯ	ಹಿಂದುಳಿದ ವರ್ಗ (ಬಿ) (ಮಹಿಳೆ)
8.	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ (ಎ)
9.	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
10.	ಸಾಮಾನ್ಯ (ಮಹಿಳೆ)	ಪರಿಶಿಷ್ಟ ಜಾತಿ
11.	ಪರಿಶಿಷ್ಟ ಜಾತಿ	ಸಾಮಾನ್ಯ (ಮಹಿಳೆ)
12.	ಸಾಮಾನ್ಯ	ಸಾಮಾನ್ಯ
13.	ಹಿಂದುಳಿದವರ್ಗ(ಬಿ)(ಮಹಿಳೆ)	ಸಾಮಾನ್ಯ
14.	ಹಿಂದುಳಿದವರ್ಗ(ಎ)	ಸಾಮಾನ್ಯ (ಮಹಿಳೆ)
15.	ಸಾಮಾನ್ಯ	ಸಾಮಾನ್ಯ
16.	ಸಾಮಾನ್ಯ	ಸಾಮಾನ್ಯ
17.	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
18.	ಹಿಂದುಳಿದವರ್ಗ(ಎ)(ಮಹಿಳೆ)	ಸಾಮಾನ್ಯ
19.	ಸಾಮಾನ್ಯ	ಸಾಮಾನ್ಯ
20	ಹಿಂದುಳಿದ ವರ್ಗ (ಎ)	ಸಾಮಾನ್ಯ (ಮಹಿಳೆ)
21.	ಹಿಂದುಳಿದ ವರ್ಗ (ಎ)	ಸಾಮಾನ್ಯ (ಮಹಿಳೆ)
22.	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
23.	ಸಾಮಾನ್ಯ	ಸಾಮಾನ್ಯ

ಉ) ಶ್ರೀ ರಾಮಯ್ಯ ಮಾತಾ ಸೆಕ್ಯುರಿಟಿ ಸರ್ವಿಸಸ್, ತುಮಕೂರು.

ಊ) 21.04.2007 ರಿಂದ 31.03.2008 ರವರೆಗೆ.

ಅರಸೀಕರೆ ಪುರಸಭೆಯ ವ್ಯಾಪ್ತಿಯ ವಾರ್ಡ್ ನಂ. 2 ರಿಂದ 13ರ ವರೆಗಿನ ಘನತ್ಯಾಜ್ಯ ವಸ್ತುವಿನ ವಿಲೇವಾರಿ ಗುತ್ತಿಗೆ ನೀಡಲು ಪುರಸಭೆಯ ವ್ಯಾಪ್ತಿಯಿಂದ ದಿ. 24.02.2007ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಜಿಲ್ಲಾಧಿಕಾರಿಯವರಿಂದ ದಿ. 19.4.2007 ರಲ್ಲಿ ಅನುಮೋದನೆ ಪಡೆದು ದರ ರೂ. 88,880/–ಗಳಿಗೆ ಕಾರ್ಯನಿರ್ವಹಿಸಲು ಅನುಮೋದನೆಯನ್ನು ನೀಡಲಾಗಿದೆ.

ಪ್ರಶ್ನೆ ಸಂಖ್ಯೆ : 43 (196) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರತಿ ವಿಶ್ವವಿದ್ಯಾಲಯಗಳಿಂದ ಪ್ರಥಮ ದರ್ಜೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ಮೂವರು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳನ್ನು ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿ ಕೊಳ್ಳಲು 1985ರಲ್ಲಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ;

ಆ) ಈ ಆದೇಶವನ್ನು ಪರಿಪಾಲಿಸಿಕೊಂಡು ಬರಲಾಗುತ್ತಿದೆಯೇ;

ಇ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಆದೇಶದ ಅನ್ವಯ ಗ್ರೂಪ್ – ಎ ಮತ್ತು ಗ್ರೂಪ್ – ಬಿ ಹುದ್ದೆಗಳಿಗೆ ನೇರ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ

ಅ) ಕರ್ನಾಟಕ ಸಿವಿಲ್ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು–ಎ ಮತ್ತು ಗುಂಪು–ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು, 1985 ದಿನಾಂಕ 11–4–1985 ರಿಂದ ಜಾರಿಗೆ ಬಂದಿವೆ.